ಕರ್ನಾಟಕ ಸರ್ಕಾರ

ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/67/2015-16 ದಿ:25-07-2016

ವಾದಿಗಳು ವಿರುದ್ಧ ಪ್ರತಿವಾದಿಗಳು

1.ಬಸವರಾಜ ತಂದೆ ಹನುಮಂತಪ್ಪ
ಕೇರಾಫ್ ತಾವರಗೇರ ಶಿವಪ್ಪ.
ಎಲೆ ಕೂಡ್ಲಿಗಿ ಗ್ರಾಮ. ಹಾರಾಪುರ ಅಂಚೆ.
ಸಿಂಧನೂರು ತಾಲೂಕು.

1.ಕೊ:ಸಣ್ಣ ಈರಣ್ಣ
11 ನೇ ವಾರ್ಡ್ ತೆಕ್ಕಲಕೋಟೆ
2.ನಾಗಪ್ಪ ತಂದೆ ಮೂಕಪ್ಪ
ಕುರುವಳ್ಳಿ ಗ್ರಾಮ.

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕುರುವಳ್ಳಿ | 334/ಡಿ/1 | 1-21 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲ್ಲೂಕು ಕುರುವಳ್ಳಿ ಗ್ರಾಮದ ಸ,ನಂ.334/ಡಿ/1 ವಿ:1-21 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:7595/2015-16 ದಿನಾಂಕ:03-02-2016 ರ ಪ್ರಕಾರ ಹಾಲಿ ಪಟ್ಟಾದಾರರಾದ **ಕೊ:ಸಣ್ಣ ಈರಣ್ಣ** ಇವರಿಂದ **ನಾಗಪ್ಪ ತಂದೆ ಮೂಕಪ್ಪ** ಇವರು ಕ್ರಯ ನೋಂದಣಿ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಕುರುವಳ್ಳಿ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಬಸವರಾಜ ತಂದೆ ಹನುಮಂತಪ್ಪ** ಇವರು **"**ಪ್ರಸ್ತಾಪಿತ ದಾವಾ ಆಸ್ತಿಯಲ್ಲಿ ತಮಗೂ ಭಾಗವಿದ್ದು, ತನ್ನ ತಾತ ಸಣ್ಣ ಈರಣ್ಣ ಇವರು ತಮಗೆ ಗೊತ್ತಿಲ್ಲದೇ ಜಮೀನನ್ನು ಮಾರಿದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು**"** ದಿನಾಂಕ:18-02-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ.ಸಂಖ್ಯೆ:29/2015-16 ದಿನಾಂಕ: 11-03-2016 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:06-06-2016 ರಿಂದ 18-07-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ಮತ್ತು ವಿಚಾರಣೆಗೆ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ

Bajawarej a.T.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿ (1) ರವರು ಸದ್ರಿ ಜಮೀನು ತಮ್ಮ ಹೆಸರಿಗೆ ಪಟ್ಟಾ ಇದ್ದು, ತಾನು ನಾಗಪ್ಪ ಇವರಿಗೆ ಕ್ರಯ ನೋಂದಣಿ ಮಾಡಿಸಿದ ಮೇರೆಗೆ, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇರುವುದಿಲ್ಲವೆಂದು ಲಿಖಿತ ಅಫಿಡೆವಿಟ್ ಹಾಜರುಪಡಿಸಿ, ವಾದಿಯ ತಕರಾರು ಅರ್ಜಿಯನ್ನು ವಜಾಗೊಳಿಸಿ, ನೋಂದಣಿ ಕ್ರಯಪತ್ರದಂತೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಾದಿಯು, ದಾವಾ ಜಮೀನು ಪಿತ್ರಾರ್ಜಿತ ಆಸ್ತಿಯೆಂದು ಸದ್ರಿ ಜಮೀನಿನಲ್ಲಿ ತನಗೂ ಭಾಗ ಬರಬೇಕಿದ್ದು, ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿದ್ದು, ಈ ಬಗ್ಗೆ ಸೂಕ್ತ ದಾಖಲೆಗಳನ್ನು ಒದಗಿಸಲು ವಿಫಲರಾಗಿರುತ್ತಾರೆ.

ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128, 129 ರ ಅಡಿ, ಸಿರುಗುಪ್ಪ ತಾಲೂಕು ಕುರುವಳ್ಳಿ ಗ್ರಾಮ ಸ,ನಂ.334/ಡಿ/1 ವಿ:1–21 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:7595/2015–16 ದಿನಾಂಕ:03–02–2016 ರ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ–

**ಸಂ.ಕಂ/ಹಬ/ವಿವಾದ/67/2015–16** **ದಿ:25–07–2016**

**<u>ಆದೇಶ</u>**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಕುರುವಳ್ಳಿ ಗ್ರಾಮದ ಸ,ನಂ.334/ಡಿ/1 ವಿ:1–21 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:7595/2015–16 ದಿನಾಂಕ:03–02–2016 ರ ಪ್ರಕಾರ **ಕೊ:ಸಣ್ಣ ಈರಣ್ಣ** ಇವರಿಂದ **ನಾಗಪ್ಪ ತಂದೆ ಮೂಕಪ್ಪ** ಇವರು ಹೊಂದಿದ ಕ್ರಯಪತ್ರದಂತೆ, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶದಿಂದ ವಾದಿಯು ಬಾಧಿತರಾಗಿದ್ದಲ್ಲಿ, ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ತಿಳಿಸಲಾಗಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25–07–2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ–ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

K. Malel